**<u>ಸಾಕ್ಷಿಯನ್ನು ದಿ14.03.2022 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ ಎನ್.ಎನ್ ವಕೀಲರಿಂದಃ</u>**

1 ನೇ ಪ್ರತಿವಾದಿ ನನ್ನ ತಂದೆ. ನಮ್ಮ ಊರು ಪರವನಹಳ್ಳಿ ಮುನಿಸ್ವಾಮಿರೆಡ್ಡಿ ನಮ್ಮ ಊರಿನ ವಾಸಿ. ಅವರ ಹೆಂಡತಿ ಹೆಸರು ಮುನಿವೆಂಕಟಮ್ಮ. ನನಗೂ ಮತ್ತು ಅವರಿಗೂ ಯಾವುದೇ ಸಂಭಂದ ಇಲ್ಲ. ನಾನು ವಾದಿಯನ್ನು ಇಲ್ಲಿಯವರೆಗೂ ನೋಡಿಲ್ಲ. ವಾದಿಯನ್ನು ನ್ಯಾಯಾಲಯದಲ್ಲೂ ಸಹ ನೋಡಿರುವುದಿಲ್ಲ. ವಾದಿ ತನ್ನ ತಾಯಿಯ ಆಸ್ತಿಯಲ್ಲಿ ಭಾಗಬೇಕು ಎಂಬ ಪರಿಹಾರ ಕೋರಿ ಈ ಕೇಸು ಹಾಕಿರುತ್ತಾರೆ. ಈ ದಾವೆಯಲ್ಲಿ ವಾದಿ ತನ್ನ ತಾಯಿ ಮುನಿವೆಂಕಟಮ್ಮ ಅಥವಾ ಮುನಿಯಮ್ಮ ಎಂಬುದಾಗಿ ತಿಳಿಸಿರುತ್ತಾರೆ. ವಾದಿ ಮತ್ತು ಆಕೇಯ ತಾಯಿಯ ಬಗ್ಗೆ ನಾನು ವಿಚಾರ ಮಾಡಿರುವುದಿಲ್ಲ. ವಾದಿಯು ನಮ್ಮ ವಿರುದ್ಧ ಸುಳ್ಳು ದಾವೆ ಸಲ್ಲಿಸಿರಿದ್ದಾರೆ ಎಂದು ಯಾವುದೇ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿರುವುದಿಲ್ಲ.

ನನ್ನ ತಂದೆಗೆ ದಾವಾ ಆಸ್ತಿಗಮ ವಿಲ್ ಮುಖಾಂತರ ಬಂದಿರುತ್ತದೆ. ಸದರಿ ವಿಲ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇವೆ. ನಾನು ನ್ಯಾಯಾಲಯಕ್ಕೆ ಯಾವುದೇ ವಿಲ್ ನ್ನು ಹಾಜರುಪಡಿಸಿರುವುದಿಲ್ಲ. ಸದರಿ ವಿಲ್ ನಮ್ಮ ಸ್ವಾಧೀನದಲ್ಲೇ ಇರುತ್ತದೆ. ಸದರಿ ವಿಲ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲಾ.

ನಾಗಿರೆಡ್ಡಿಯವರ ಮಗಳು ಮುನಿಯಮ್ಮ ಎಂದರೆ ನನಗೆ ಗೊತ್ತಿಲ್ಲ . ಸದರಿ ಮುನಿಯಮ್ಮ ನನ್ನ ತಂದೆಯ ಮೊದಲನೇ ಹೆಂಡತಿ ಎಂದರೆ ನನಗೆ ಗೊತ್ತಿಲ್ಲ. ಸದರಿ ಮುನಿಯಮ್ಮನ ಮಗಳೇ ಕಾಂತಮ್ಮ ಎಂದರೆ ನನಗೆ ಗೊತ್ತಿಲ್ಲ. ವಾದಿ ಮತ್ತು 2 ನೇ ಪ್ರತಿವಾದಿ ಅಕ್ಕ ತಂಗಿಯರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯ ಎರಡನೇ ಹೆಂಡತಿ ಅಕ್ಕಯ್ಯಮ್ಮ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ ನನ್ನ ತಂದೆಗೆ ಮೂರನೇ ಹೆಂಡತಿ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯ ಮೊದಲನೇ ಮತ್ತು ಎರಡನೇ ಹೆಂಡತಿ ಈಗ ಮರಣ ಹೊಂದಿರುತ್ತಾರೆ ಎಂದರೆ ಸಾಕ್ಷಿಯುನಾನು ಹುಟ್ಟುವ ಮುಂಚೆಯೇ ಆಗಿರುವ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

ನನ್ನ ತಂದೆಗೆ ನನ್ನ ತಾತ ಮುನಿಸ್ವಾಮಿರೆಡ್ಡಿಯವರು ಸದರಿ ವಿಲ್‌ನ್ನು ಮಾಡಿಕೊಟ್ಟಿರುತ್ತಾರೆ. ದಾವಾ ಸ್ವತ್ತುಗಳು ನಾಗಿರೆಡ್ಡಿ ಮತ್ತು ಆತನ ಹೆಂಡತಿ ಮುನಿವೆಂಕಟಮ್ಮನಿಗೆ ಸೇರಿದ ಸ್ವತ್ತುಗಳು ಎಂದರೆ ಸಾಕ್ಷಿಯು ಅವರು ನಮಗೆ ವಿಲ್ ಮಾಡಿಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ವಿಲ್ ನ್ನು ನನ್ನ ತಂದೆ ಮತ್ತು ನಾಗಿರೆಡ್ಡಿಯ ಮಗಳು ಮುನಿಯಮ್ಮನಿಗೆ ಜೆಂಟಿ ಮಾಡಿಕೊಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮುನಿಯಮ್ಮ

ಮತ್ತು ನನ್ನ ತಂದೆ ಗಂಡ ಹೆಂಡತಿ ಯಾದ ಕಾರಣ ಅವರ ಹೆಸರಿಗೆ ವಿಲ್ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನಾಗಿರೆಡ್ಡಿ ಮತ್ತು ಆತನ ಹೆಂಡತಿ ಮರಣದ ನಂತರ ಸದರಿ ಸ್ವತ್ತುಗಳು ನನ್ನ ತಂದೆ ಮುನಿರೆಡ್ಡಿ ಮತ್ತು ಮುನಿಯಮ್ಮನಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮುನಿಯಮ್ಮ ಮರಣದ ಹೊಂದಿದ ಕಾರಣ ಆಕೆಯ ಮಕ್ಕಳಾದ ವಾದಿ ಮತ್ತು 2 ನೇ ಪ್ರತಿವಾದಿಗೆ ದಾವಾ ಆಸ್ತಿಗಳಲ್ಲಿ ಭಾಗದ ಹಕ್ಕು ಇರುತ್ತದೆ ಎಂದರೆ ಸಾಕ್ಷಿಯು ಅವರ ಮಕ್ಕಳು ಯಾರು ಎಂಬುದು ನನಗೆ ಗೊತ್ತಿಲ್ಲ .

ಈಗಲೂ ನನ್ನ ತಂದೆ ನನ್ನ ಜೊತೆಯಲ್ಲೇ ವಾಸವಾಗಿದ್ದಾರೆ. ನನ್ನ ತಂದೆ ನನ್ನ ಜೊತೆಯಲ್ಲೆ ಇರುವ ಕಾರಣ ನನಗೆ ದಾನಪತ್ರ ಮಾಡಿಕೊಡುವ ಅವಶ್ಯಕತೆ ಇರಲಿಲ್ಲ ಎಂದರೆ ಸಾಕ್ಷಿಯು ನಾನು ಸಾಲ ತೆಗೆಯುವ ಕಾರಣಕ್ಕಾಗಿ ನನ್ನ ತಂದೆ ದಾನ ಪತ್ರ ಮಾಡಿಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ ವಾದಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಮತ್ತು ನನ್ನ ತಂದೆ ಶೇರಿಖಾಗಿ ನಿಡಿ–1 ನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಂದೆ ಈ ದಾವೆಯಲ್ಲಿ ಸಾಕ್ಷಿ ವಿಚಾರಣೆ ಮಾಡಿಕೊಂಡಿರುತ್ತಾರೆ . ಸಾಕ್ಷಿಯು ಮುಂದುವರೆದು ನನ್ನ ತಂದೆ ಓಡಾಡಲು ಆಗುವುದಿಲ್ಲ ಎಂದು ನುಡಿದಿರುತ್ತಾರೆ. ನನ್ನ ತಂದೆ ಹೆಸರಿಗೆ ಲೋನ್ ಮಾಡಿಸಲು ಯಾವುದೇ

ತೊಂದರೆ ಇರದಿದ್ದರು ವಾದಿಗೆ ಮೋಸ ಮಾಡುವ ಉದ್ದೇಶದಿಂದ ನಿಡಿ–1 ನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಈಗ ಸಾಕ್ಷಿಗೆ ಒಂದು ದಾಖಾಲತಿಯನ್ನು ತೋರಿಸಲಾಗಿ ಅದರಲ್ಲಿರುವ ಸಹಿ ನಿಮ್ಮ ತಂದೆದು ಎಂದು ಕೇಳಲಾಗಿ ಸಾಕ್ಷಿಯು ಇಲ್ಲಾ ಎಂದು ನುಡಿದಿರುತ್ತಾರೆ. ಪಾಪಿರೆಡ್ಡಿ ಮಗ ಪಿ.ಬಾಲರೆಡ್ಡಿ ನಮ್ಮ ಊರಿನ ಗ್ರಾಮಸ್ಥರು ಎಂದರೆ ನನಗೆ ಗೊತ್ತಿಲ್ಲ. ಈಗಾಗಲೇ ಸಾಕ್ಷಿಯು ತೋರಿಸಿದ ದಾಖಾಲಾತಿಯಲ್ಲಿರುವ ಮುನಿಸ್ವಾಮಿ ರೆಡ್ಡಿ ಮಗ ಮುನಿರೆಡ್ಡಿ ಎಂದರೆ ನನ್ನ ತಂದೆ ಎಂದರೆ ಸಾಕ್ಷಿಯು ಸರಿ ಎಂದು ನುಡಿದಿರುತ್ತಾರೆ. ಸದರಿ ದಾಖಾಲೆಯಲ್ಲಿ ನನ್ನ ತಂದೆ ನನಗೆ ವಿಲ್ ಮುಖಾಂತರ ಬಂದ ಆಸ್ತಿಯನ್ನು ಮಾರಾಟ ಮಾಡುತ್ತಿದ್ದೇವೆ ಎಂದು ತಿಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈಗ ಸಾಕ್ಷಿಗೆ ನಿಡಿ-1 ನ್ನು ತೋರಿಸಲಾಗಿ ಸಾಕ್ಷಿಯು ಅವರ ತಂದೆಯ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ನಾವು ವಾದಿಗೆ ಭಾಗ ಕೊಡುವುದರಿಂದ ಮೋಸ ಮಾಡುವ ಉದ್ದೇಶದಿಂದ ಸುಳ್ಳು ತಕಾರಾರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಲ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದರೇ ಸತ್ಯಾಂಶ ಹೊರ ಬರುತ್ತದೆ ಎಂಬ ಕಾರಣಕ್ಕಾಗಿ ಅದನ್ನು ಉದ್ದೇಶ ಪೂರ್ವಕವಾಗಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಕೆಲವೊಂದು ದಾವಾ ಆಸ್ತಿಗಳು ನಮ್ಮ ಸ್ವಯಾರ್ಜಿತ ಆಸ್ತಿ ಎಂದು ತೋರಿಸಲು ಯಾವುದೇ ದಾಖಾಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ

ಸರಿಯಲ್ಲ. ಸದರಿ ಸ್ವತ್ತುಗಳು ಸ್ವಯಾರ್ಜಿತ ಆಸ್ತಿಗಳಲ್ಲದ ಕಾರಣ ನಾವುಗಳು ಯಾವುದೇ ದಾಖಾಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**Sd/-**
(ದೀಪು ಬಿ.ಸಿ.)
ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಬಂಗಾರಪೇಟೆ.